ಅಮ್ಮ ಸುಟ್ಟಿಟ್ಟಿರುತ್ತಿದ್ದ ಹಪ್ಪಳಗಳು ಯಾವ ಮೂಲೆಗೆ? ಒಲೆ ಕೆಂಡವನ್ನು ಕೊಂಚ ಹೊರಗೆಳೆದು, ತಾವೇ ಮನಸೋ ಇಚ್ಛೆ ಹಪ್ಪಳ ಸುಟ್ಟುಕೊಂಡು, ಕಮ್ಮನೆಯ ಕೊಬ್ಬರಿ ಎಣ್ಣೆ ಸವರಿಕೊಂಡು, ಒಲೆಬುಡದಲ್ಲಿ ಬೆಚ್ಚಗೆ ಬೆಕ್ಕುಗಳಂತೆ ಒತ್ತಿ ಕೂತುಕೊಂಡು ತಿಂದಿದ್ದೇ ತಿಂದಿದ್ದು. ಹಲಸಿನ ತೊಳೆ ಬಿಡಿಸುವುದರಿಂದ ತೊಡಗಿ ಕಾಗೆ ಕಚ್ಚಿಕೊಂಡು ಹೋಗದಂತೆ ಕಾವಲು ಮಾಡುವವರೆಗೆ ಪ್ರತಿ ಹಂತದಲ್ಲೂ ಅಮ್ಮನಿಗೆ ಸಹಕಾರ. ಹೀಗಿದ್ದಿದ್ದರಿಂದಲೇ ಅಲ್ಲವೇ ಅಡಿಗೆ ಮಾಡುವುದರಲ್ಲಿ ಕೂಡಾ ಪರಿಣಿತಿ ಅಂತಲ್ಲದಿದ್ದರೂ ತಕ್ಕಮಟ್ಟಿನ ಅನುಭವ ಪಡೆದಿದ್ದು? ಅನುಭವ ಅನ್ನುವುದು ಪ್ರಯೋಜನಕ್ಕೆ ಬಂದೇ ಬಂತು, ಅನಿರೀಕ್ಷಿತ ರೀತಿಯಲ್ಲಿ..

ರಾಮಚಂದ್ರ ತಿರುಗಿ ಬಂದು ಮೆಟ್ಟಿಲಿನ ಮೇಲೆ ಅಂಡೂರಿದ. ಹುಣ್ಣಿಮೆಯ ಆಸುಪಾಸಿನ ದಿನಗಳಿರಬೇಕು. ಬೆಳದಿಂಗಳು ಭುವಿಯ ಸಕಲವನ್ನೂ ತೋಯಿಸುತ್ತಾ, ಮೀಯಿಸುತ್ತಾ, ಕಣ್ಣಿಗೆ ತಂಪೆರೆಯುತ್ತಿದೆ. ಎದುರಿನ ಕೈದೋಟದಲ್ಲಿ ಮಲ್ಲಿಗೆಯರಳು ನಿಧನಿಧಾನವಾಗಿ ಬಿರಿಯುತ್ತಿರಬೇಕು, ಮೂಗನ್ನು ಸೋಕಿಯೂ ಸೋಕದಂತಾ ಮಂದ ಸುಗಂಧ ತಂಗಾಳಿಯೊಡನೆ ತೇಲಿ ಬಂದು ಮೈ ಸವರುತ್ತಿದೆ. ಗಾಢವಾಗಿ ಉಸಿರೆಳೆದುಕೊಂಡು ಪರವಶನಾದ ರಾಮಚಂದ್ರ. ಪರವಶನಾಗಿದ್ದು ವರ್ತಮಾನದ ಗಳಿಗೆಗೆ ಸ್ಪಂದಿಸಿಯಲ್ಲ, ಭೂತಕಾಲದ ರಸನಿಮಿಷಗಳ ನೆನವರಿಕೆಯಿಂದ.

ಮದುಮಗಳಾಗಿ ಮನೆ ತುಂಬಿದ ಹುಡುಗಿ ಮನೆಯೊಳಗೆ ಕಾಲಿಡುವುದಕ್ಕಿಲ್ಲ, ತೌರೂರಿಗೆ ಹೋಗಲು ಎಣ್ಣುತ್ತಿರುವುದು ರಾಧಮ್ಮನಿಗೆ ಪಥ್ಯವಾಗಿರಲಿಲ್ಲ. ಅವತ್ತು ರಾತ್ರಿ ಊಟಕ್ಕೆ ಕೂತಾಗ ಸೂಚ್ಯವಾಗಿ ವಿಷಯ ಪ್ರಸ್ತಾಪಿಸಿದ್ದ ರಾಮಚಂದ್ರ,

'ನಾಳೆ ಬೆಳಗಾತ ಒಂದು ತಿರುಗಾಟ ಬಂದಿದೆ ಮಾರಾಯ್ತೀ. ಹೋಗ್ಬರೋದಾ?'

ಪಕ್ಕದಲ್ಲೇ ತಲೆ ಅಡಿ ಹಾಕಿ ಕೂತು ಉಣ್ಣುತ್ತಿದ್ದಳು ನಾಗಶ್ರೀ. ಅವಳ ಸಮಕ್ಷಮದಲ್ಲಿ ನಡೆದಿತ್ತು ಮಾತುಕತೆ.

'ನಿಂಗೆ ರಾಗ ಬರುತ್ತನೋ? ಮದುವೆ ಗಲಾಟೇಲಿ ಸಮಾ ನಿದ್ದೆ ಇಲ್ದೆ ಓಡಾಡಿದ್ದು ಸಾಲ್ದಾ? ಉಂಡ್ಕಂಡು, ತಿಂದ್ಕಂಡು ಬೆಚ್ಚಗಿರಿ ಮನೇಲಿ. ಸುಮ್ನೆ ಆ ಹುಡುಗೀನ ಗೋಳು ಹುಯ್ಕಂಬೇಡ..'

'ಹನಿಮೂನ್‌ಗೆ ಹೋಗೋಣಾಂತ ಪ್ಲಾನ್ ಮಾಡ್ಕಂಡಿದೀಯನೋ? ಯಾವೂರಿಗೆ ಹೋಗ್ತೀರಿ?' ಬಾಯಿ ಕಳೆದುಕೊಂಡು ಕೇಳಿದ್ದ ರಘುರಾಮ.

'ಹನಿ ನಮ್ಮನೇಲೇ ಇದೆ. ಮೂನು ನಮ್ಮನೆ ಅಂಗಳಕ್ಕೆ ಬರ್ತಾನೆ. ಬೇರೆ ಎಲ್ಲೋ ಹುಡುಕ್ಕಂಡು ಹೋಗೋದೆಂತಕ್ಕೆ?'

'ಮತ್ತೆ?'

ಉತ್ತರಿಸದೆ ಸೊರ್ರನೆ ಸಾರನ್ನದ ಒಂದು ತುತ್ತು ಬಾಯಿಗಿಟ್ಟಿದ್ದ ರಾಮಚಂದ್ರ. ಹೀಗೆ ಸುರಿಯುತ್ತಾ ಊಟ ಮಾಡುವುದು ನಾಗಶ್ರೀಗೆ ಇಷ್ಟವಾಗುವುದಿಲ್ಲವೆಂದು ಆಮೇಲೆ ಗೊತ್ತಾಗಿತ್ತು. ಇವನ ಎಷ್ಟೋ ನಡವಳಿಕೆಗಳು ಅವಳಿಗೆ ಇಷ್ಟವಾಗುತ್ತಿರಲಿಲ್ಲ ಎನ್ನುವುದೂ ಕೂಡಾ..

'ಊರಿಗೆ ಹೋಗ್ಬರೋಣಾಂತಿದಾಳೆ ಇವ್ಳು..'

'ಮೊನ್ನೆ ಇನ್ನೂ ಬಂದಿದ್ದಲ್ವಾ?' ರಾಧಮ್ಮನ ದನಿಯಲ್ಲಿ ಸಣ್ಣಗೆ ಅಸಹನೆ ಮಿಡಿಯುತ್ತಿತ್ತಾ? ಗೊತ್ತಾಗುವಷ್ಟೇನಿರಲಿಲ್ಲ.

'ಹಂಗಲ್ಲ ಕಣೇ, ಅತ್ತೆಗೆ ಸ್ವಲ್ಪ ಮೈ ಹುಷಾರಿಲ್ಲಂತೆ. ರಾತ್ರಿ ಫೋನು ಬಂದಿತ್ತಲ್ಲ..'

'ಓ..' ಸಮ್ಮತಿಯೂ ಅಲ್ಲದ, ಅಸಮ್ಮತಿಯೂ ಅಲ್ಲದ ಒಂದು ಉದ್ಗಾರ.

'ಎರಡೇ ದಿನ, ಬಂದ್ಬಿಡ್ತೀವಿ..' ರಾಧಮ್ಮ ಮತ್ತೆ ಮಾತಾಡಿರಲಿಲ್ಲ.

ಕೋಳಿ ಕೆದಕಿದಂತೆ ಊಟ ಮಾಡುವ ಏಳು ಮಲ್ಲಿಗೆ ತೂಕದ ರಾಜಕುಮಾರಿಯಂತ ನಾಗಶ್ರೀ ಎಲ್ಲರಿಗಿಂತ ಮುಂಚೆ ಉಂಡು ಕೈ ತೊಳೆಯಲು ಬಚ್ಚಲಿಗೆ ಹೋದಾಗ ಸದ್ದಿಲ್ಲದೆ ಅವಳನ್ನು ಹಿಂಬಾಲಿಸಿಕೊಂಡು ಬಂದ ವಾರಗಿತ್ತಿ ಹೇಳಿದ್ದಳು,

'ಹೋಗ್ಬಾರೇ ನೀನು. ಪುಣ್ಯ ಮಾಡಿದ್ದಿ, ತೌರು ಮನೆ ಬೇರೆ ಊರಲ್ಲಿದೆ. ನನ್ನ ಕರ್ಮ ನೋಡು. ಒಂದೇ ಊರಲ್ಲಿ ಇದ್ದಿದ್ದಕ್ಕೆ ಒಪ್ಪೊತ್ತು ತೌರುಮನೇಲಿ ಉಳಿಯೋ ಸೌಭಾಗ್ಯ ನಂಗಿಲ್ಲ. ಹಿಂಗೆ ಹೋಗೋದು, ಹಂಗೆ ಬರೋದು..'

'ಅಮ್ಮಂಗೆ ಮತ್ತೆ ಎಚ್ಚರ ತಪ್ಪಿತ್ತಂತೆ. ನಂಗೆ ದೊಡ್ಡ ಚಿಂತೆ ಹತ್ಗಂಡಿದೆ..' ಭವಾನಿ ಭುಸ್ಸನೆ ಉಸಿರು ಬಿಟ್ಟಿದ್ದಳು.

'ಏನ್ಮಾಡ್ತಿ ಹೇಳು? ಹೆಣ್ಣುಮಕ್ಕಳ ಹಣೇಬರ. ಮದುವೆ ಅಂತಾಗಿ ಗಂಡನ ಮನೆ ಹೊಸಿಲು ದಾಟಿ ಒಳಗೆ ಬಂದ್ರೆ ಅಲ್ಲಿಗೆ ಮುಗೀತು. ಹುಟ್ಟಿದ ಮನೆಗೆ ನೆಂಟರಾಗಿಬಿಡ್ತೀವಿ..'

ನಾಗಶ್ರೀ ಈ ಮಾತುಕತೆಯನ್ನು ಗಂಡನಿಗೆ ವರದಿ ಒಪ್ಪಿಸಿದ್ದಳು, ಪಾಪ ಅಕ್ಕ.. ಎಂದು ಸಹಾನುಭೂತಿ ತೋರಿಸುವ ಭರದಲ್ಲಿ.

ಅವತ್ತಿನ ರಾತ್ರಿ ನಾಗಶ್ರೀ ಗಂಡನ ಪ್ರಣಯೋನ್ಮಾದಕ್ಕೆ ಸ್ಪಂದಿಸದೆ ಸಪ್ಪಗಿದ್ದಿದ್ದು ರಾಮಚಂದ್ರನಿಗೆ ಕೈಗೆ ಬಂದ ತುತ್ತು ಬಾಯಿಗಿಲ್ಲದಂತಾಗಿತ್ತು. ಅಮ್ಮನಿಗೆ ಏನೋ ಆಗಿದೆ ಎನ್ನುವ ಕೊರಗು ಹಚ್ಚಿಕೊಂಡಿರುವವಳನ್ನು ಒತ್ತಾಯಿಸುವ ಉಸಾಬರಿಗೆ ಹೋಗದೆ ಅವಳನ್ನು ಬರಸೆಳೆದುಕೊಂಡು ತನ್ನ ಅಪ್ಪುಗೆಯಲ್ಲಿ ಮಲಗಿಸಿಕೊಂಡಿದ್ದ ರಾಮಚಂದ್ರ.

* * *

ಮಗಳ ಮುಖ ನೋಡಿದ್ದೇ ನೋಡಿದ್ದು, ಸರೋಜಮ್ಮ ಗೆಲುವಾಗಿ ಬಿಟ್ಟರು.

'ಬರ್ತೀಯೋ, ಇಲ್ವೋಂತ ಕನವರಿಸ್ತಿದ್ಲು ಕಣೋ. ಸದ್ಯ ಬಂದ್ರಲ್ಲ..' ಶೀನಪ್ಪಯ್ಯ ಹಾರ್ದಿಕವಾಗಿ ಸ್ವಾಗತಿಸಿದ್ದರು. ಅತ್ತೆಮ್ಮನಿಗೆ ಹಾಸಿಗೆ ಹಿಡಿಯುವಂತಾದ್ದೇನಾಗದೆ ಪುಟು ಪುಟು ಓಡಾಡಿಕೊಂಡು ಅವರು ಕೆಲಸ ಮಾಡುತ್ತಿರುವುದನ್ನು ಕಂಡು ರಾಮಚಂದ್ರನಿಗೆ ಹೋದ ಜೀವ ತಿರುಗಿ ಬಂದಂತಾಗಿತ್ತು. ನಾಗಶ್ರೀಗೂ.

'ಸುಮ್ನೆ ಹೆದರಿಸಿಟ್ಬಿಟ್ಟೆ ಕಣೇ. ನಿಂಗೆ ಏನಾಗಿದ್ಯೋ ಅಂತ ರಾತ್ರಿ ಇಡೀ ನಂಗೆ ಕಣ್ಣು ಮುಚ್ಚಿ ನಿದ್ದೆ ಬರ್ಲಿಲ್ಲ, ಗೊತ್ತಾ?' ತಿಂಡಿ ತಿನ್ನುವಾಗ ಮುದ್ದಾಗಿ ಛೇಡಿಸಿದ್ದಳು ನಾಗಶ್ರೀ.

'ಅಯ್ಯೋ, ಅದರ ಕತೆ ಯಾಕೆ ಕೇಳ್ತಿ? ಬಸ್ಸಿಳಿದು ಮನೆ ಒಳಗೆ ಕಾಲಿಡ್ತಿದ್ದ ಹಾಗೆ ನಿನ್ನಮ್ಮನಿಗೆ ದುಃಖ ಒದ್ಗಂಡು ಬಂತು. ಕಣ್ಣುಬೇಳೆ ಮೇಲೆ ಮಾಡ್ಕಂಡು ಬಿದ್ದೇಬಿಟ್ಳು ಅಂತೀನಿ. ಮುಗೀತು ಕತೆ ಅಂತ ಹೆದರಿ ಕಂಗಾಲಾಗಿದ್ದೆ ನಾನು..'

'ಸುಮ್ನಿರ್ರೀ, ಒಂದಕ್ಕೆ ಒಂಭತ್ತು ಸೇರಿಸಿ ಹೇಳ್ಬೇಡಿ..' ಮೂತಿ ತಿರುಪಿದ್ದರು ಸರೋಜಮ್ಮ.

'ನೀನು ಧೈರ್ಯ ತಂದ್ಕಂಬೇಕು ಕಣೇ. ನೀನೂ ಮನಸ್ಸಿಗೆ ಹಚ್ಕಂಡು, ಅಪ್ಪಂಗೂ ಕೈಕಾಲುಗೆಡಿಸಿದ್ರೆ ಯಾರಿದಾರೆ ನಿಮ್ಮನ್ನ ನೋಡ್ಕಳೋಕೆ? ಮೂರು ಮೂರು ದಿನಕ್ಕೆ ನಾನು ಓಡ್ಬರೋಕಾಗುತ್ತಾ?' ನಾಗಶ್ರೀ ತಾಯಿಗೆ ಬುದ್ಧಿ ಹೇಳಿದ್ದಳು.

'ಅದನ್ನೆಲ್ಲಾ ಚೋಟುದ್ದದ ನೀನು ಹೇಳ್ಕೊಡ್ಬೇಕಾ? ನಂಗೆ ಏನು ಆಗ್ತಿದೇಂತ ನಂಗೇ ಗೊತ್ತಾಗ್ದಿದ್ರೆ ಏನು ಸಾಯ್ಲಿ ನಾನು?'

'ಒಳ್ಳೇ ಅಮ್ಮ..' ಅಂದಿದ್ದಳು ನಾಗಶ್ರೀ.

ಅತ್ತೆಯನ್ನು ತಜ್ಞ ಮನೋವೈದ್ಯರ ಬಳಿ ಕರೆದುಕೊಂಡು ಹೋಗಬೇಕೆಂದು ಸಂದರ್ಭ ನೋಡಿ ಮಾವನ ಕಿವಿ ಕಚ್ಚಿದ್ದ ರಾಮಚಂದ್ರ.

'ನೋಡಣ, ನೋಡಣ, ತೀರಾ ಮಿಗುವರೆದ್ರೆ ಡಾಕ್ಟ್ರ ಹತ್ರ ಹೋಗೋದು ಉಂಟೇ ಉಂಟಲ್ಲ?' ಶೀನಪ್ಪಯ್ಯ ಅಳಿಯನ ಮಾತಿಗೆ ಸಹಮತ ಸೂಚಿಸಿದ್ದರು.

ಇಷ್ಟೇಯಾ? ಮದುವೆಯಾದ ನಂತರ ಮೊದಲ ಬಾರಿಗೆ ಅವಸರವಸರವಾಗಿ ಮಾವನ ಮನೆಗೆ ಹೋಗಿದ್ದ ಆ ಅನುಭವ ಇಷ್ಟೇಯಾ? ಮೆಟ್ಟಿಲ ಮೇಲೆ ಕೂತಿದ್ದ ರಾಮಚಂದ್ರ ರಾತ್ರಿಯ ತಣ್ಣ ಗಾಳಿಯಲ್ಲೂ ಬೆಚ್ಚಗಾಗಿದ್ದ. ಗಂಡನ ಮನೆಯಲ್ಲಿ ಕಣ್ಣೆ ಕಟ್ಟಿದ ಕರುವಿನಂತಿದ್ದ ನಾಗಶ್ರೀ ತೌರೂರಲ್ಲಿ ಚೆಲ್ಲುವರಿದು ಹರಿಯುವ ನದಿಯಂತಾಗಿದ್ದಳು. ಬೆಳಗಿನ ತಿಂಡಿ ಮುಗಿಯುತ್ತಿದ್ದಂತೆ 'ನನ್ನ ಕೋಣೆ ನೋಡಿದೀರಾ ನೀವು?' ಎನ್ನುತ್ತಾ ಕೋಣೆ ತೋರಿಸುವ ಹೆಳೆಯಲ್ಲಿ ಗಂಡನನ್ನು ಉಪ್ಪರಿಗೆ ಮೇಲಿದ್ದ ತನ್ನ ರೂಮಿಗೆ ಕರೆದೊಯ್ದು, ಬಾಗಿಲ ಅಗುಳಿ ಮುಚ್ಚಿ, ಮೋಹಾವೇಶದಿಂದ ಅವನನ್ನು ಆವರಿಸಿಕೊಂಡಿದ್ದಳು.

'ಏನೇ ಇದು ಹಾಡಾ ಹಗಲಲ್ಲಿ? ಯಾರಾರೂ ನೋಡಿದ್ರೆ ಏನಂದ್ಕಂತಾರೆ?'

'ಏನಂದ್ಕಂತಾರೆ? ಇಷ್ಟಕ್ಕೂ ಉಪ್ಪರಿಗೆ ಹತ್ತಿ ನನ್ನ ಕೋಣೆಗೆ ಯಾರೂ ಬರಲ್ಲ..'

**(ಸಶೇಷ)**